# ಶ್ರೀ ಪ್ರಸನ್ನ ವೆಂಕಟದಾಸರ ಕೃತಿಗಳ ಸಂಶೋಧನೆ ಮತ್ತು ಚಿಂತನೆ

–ಲಕ್ಷ್ಮೀಕಾಂತ ಪಾಟೀಲ
ಹರಿದಾಸ ಸಾಹಿತ್ಯ ಸಂಶೋಧಕ
ಮತ್ತು ಗಾಯಕ–ಬೆಂಗಳೂರು

– 1 –

ಸನ್ 1983 ರಿಂದ ದಾಸ ಸಾಹಿತ್ಯ ಸಂಶೋಧನೆಯಲ್ಲಿ ತೊಡಗಿಸಿಕೊಂಡ ನನಗೆ ಗೋವಾದಲ್ಲಿ 150–175 ವರ್ಷದ ಹಿಂದೆ ಹೋಗಿ ನೆಲಸಿದ ನವಲಿ ಎಂಬುವವರ ಮನೆಯಲ್ಲಿ ದೊರೆತ ಗ್ರಂಥ ರಾಶಿಯಲ್ಲಿ ಪ್ರಸನ್ನ ವೆಂಕಟದಾಸರ ಕೃತಿಗಳ ಎರಡು ಕಟ್ಟು ದೊರೆತಿವೆ? ಸನ್ 1781 ರಲ್ಲಿ ಜನಿಸಿದ ತಾತೇದಾಸರೆಂಬುವವರು ಶ್ರೀಜಗನ್ನಾಥದಾಸರಿಗೆ ಕಿರಿಯ ಶಿಷ್ಯರೂ, ಸೇವಕರು ಆಗಿದ್ದರು ಎಂಬುದಾಗಿ ತಿಳಿದು ಬರುತ್ತಿದ್ದು, ಅವರ ಹಸ್ತ ಪ್ರತಿಯಲ್ಲಿ ಶ್ರೀಪಾದರಾಜರಾದಿಯಾಗಿ ಅನೇಕ ಹರಿದಾಸರ ಕೃತಿಗಳು ಅಲ್ಲದೇ ಶ್ರೀಪಾದರಾಜರು, ವಿಜಯದಾಸರು, ವಾದಿರಾಜರು, ಜಗನ್ನಾಥದಾಸರು ಮತ್ತು ಪ್ರಸನ್ನ ವೆಂಕಟದಾಸರ ಸ್ವಲಿಖಿತ ಕೃತಿಗಳು ಇವೆ. ಒಂದು ಗಂಟಿನಲ್ಲಿ 40 ಮತ್ತು ಇನ್ನೊಂದು ಗಂಟಿನಲ್ಲಿ 38 ಈ ರೀತಿ ಒಟ್ಟು 78 ಕೃತಿಗಳು ಪ್ರಸನ್ನ ವೆಂಕಟದಾಸರ ಸ್ವಹಸ್ತಾಕ್ಷರದಲ್ಲಿಯೂ ಮತ್ತು ಇನ್ನೂ ಕೆಲವು ಕೃತಿಗಳು ತಾತೇದಾಸರ ಹಸ್ತಾಕ್ಷರದಲ್ಲಿಯೂ ಇವೆ. ಇದೂ ಅಲ್ಲದೇ ಪುರಂದರದಾಸರ ಮತ್ತು ಕನಕದಾಸರ ಕೆಲವು ಅಪ್ರಕಟಿತ ಕೃತಿಗಳು ಪ್ರಸನ್ನವೆಂಕಟದಾಸರ ಹಸ್ತಾಕ್ಷರದಲ್ಲಿರುವುದು ಈ ಸಂಗ್ರಹದಲ್ಲಿವೆ. ಇದರೊಂದಿಗೆ ತಾತೇದಾಸರು ಬರೆದಿಟ್ಟಿರುವ ಕೆಲವು ಕೃತಿಗಳಲ್ಲಿ ಮಧ್ಯದಲ್ಲಿ ಬಹುಮುಖ್ಯ ಟಿಪ್ಪಣಿ ಮಾಡಿದ್ದು ಅವುಗಳು ಪ್ರಸನ್ನ ವೆಂಕಟದಾಸರದ್ದಲ್ಲದೇ ಇನ್ನು ಅನೇಕ ಹರಿದಾಸರ ಜೀವನಕ್ಕೆ ಸಂಬಂಧಿಸಿದ ಮಾಹಿತಿಯನ್ನು ನೀಡುತ್ತವೆ. ಈ ಟಿಪ್ಪಣಿಗಳು ಸಂಶೋಧನೆ ದೃಷ್ಟಿಯಿಂದ ಬಹಳ ಮಹತ್ವದ್ದೆನಿಸುತ್ತವೆ. ಇದರೊಂದಿಗೆ ಈಗಿನ ಮಹಾರಾಷ್ಟ್ರ ಮೂಲದ ಪೇಶ್ವೆ ಮನೆತನದವರಲ್ಲಿದ್ದ ಕೆಲವು ದಾಖಲೆಗಳು ಪ್ರಸನ್ನವೆಂಕಟದಾಸರ ಜೀವನ, ಸಾಧನೆ, ವ್ಯಕ್ತಿತ್ವ ತಿಳಿದುಕೊಳ್ಳಲು ಸಹಕಾರಿಯಾಗುವವು. ಚಂದ್ರಗಿರಿಯಲ್ಲಿ ನಾನಾ ಭಾವೆ ಎಂಬ ಒಂದು ಮನೆಯಿದೆ. ಅವರ ವಂಶಜರು ಮರಾಠಾ ಮತ್ತು ಪೇಶ್ವೆಯವರಲ್ಲಿ ಬಹಳ ದೊಡ್ಡ ಹುದ್ದೆಯಲ್ಲಿದ್ದರು ಎಂಬುದು ಇವರಲ್ಲಿರುವ ಕೆಲವು ದಾಖಲೆಗಳಿಂದ ತಿಳಿದು ಬರುತ್ತದೆ. ಪ್ರಸ್ತುತ ಪುಣೆ ಮತ್ತು ನಾಗಪುರಗಳಲ್ಲಿ ಈ ಭಾವೆ ಮನೆತನದ ಜನರು ವಾಸವಾಗಿದ್ದಾರೆ. ಅನೇಕ ವಿಚಾರದ ಹಳೆ ದಾಖಲೆಗಳು, ಹೇರಳ ಗ್ರಂಥ ರಾಶಿಯೇ ಇವರಲ್ಲಿದೆ. ಮರಾಠರ ಪ್ರಾಬಲ್ಯವಿದ್ದ ಸಮಯಕ್ಕೆ ಪೇಶ್ವೆಗಳು ಅನೇಕ ಹುದ್ದೆಯಲ್ಲಿದ್ದದ್ದು, ಈಗಿನ ಕರ್ನಾಟಕದ ಅನೇಕ ಭಾಗಗಳಲ್ಲಿ ಈ ಪೇಶ್ವೆಯರು ಸಾಮಂತರಾಗಿಯೋ, ಮಾಲೀಕರಾಗಿಯೋ, ಸುಬೇದಾರರಾಗಿಯೋ ಆಡಳಿತ ನಡೆಸುತ್ತಿದ್ದ ವಿಷಯಗಳು ಈ ದಾಖಲೆಗಳಲ್ಲಿ ಅಡಗಿದೆ. ಕ್ರಿ.ಶ.1740 ರಲ್ಲಿ ಮರಾಠರಿಂದ ಸ್ವತಂತ್ರವಾಗಿ ಪೇಶ್ವೆಯವರು ಆಡಳಿತಭಾರ ಪ್ರಾರಂಭಿಸಿದ್ದು, ಅವರ ವಂಶಾವಳಿ ಮತ್ತು ಪೇಶ್ವೆ ಆಡಳಿತ ಪದ್ಧತಿ ಹಾಗೂ ಅವಸಾನ ಮುಂತಾದ ವಿಷಯ ದಾಖಲಾಗಿವೆ. ಕ್ರಿ.ಶ.1740 ರಲ್ಲಿ ಪ್ರಥಮ ದೊರೆ ಬಾಳಾಜಿ ಬಾಜಿ ಎಂಬುವವನು ಈಗಿನ ಗಜೇಂದ್ರಗಡದಲ್ಲಿ ಮದ್ದಿನಕೋಟೆಯೊಂದನ್ನು ನಿರ್ಮಿಸಿದನೆಂದೂ, ಈ ಕೋಟೆಯ ದಾರಿಯಲ್ಲಿ ಪ್ರಸನ್ನ ವೆಂಕಟದಾಸರಿಂದ ನೀರ ಹನುಮನನ್ನು ಪ್ರತಿಷ್ಠಾಪಿಸಲಾಯಿತು ಎಂದೂ ಈ ನಾನಾ ಭಾವೆಯವರಲ್ಲಿ ದೊರೆತ ದಾಖಲೆಯೊಂದರಿಂದ ಕಂಡು ಬರುತ್ತದೆ. ಬಾಳಾಜಿ ಬಾಜಿ ಪ್ರಸನ್ನ

ವೆಂಕಟದಾಸರನ್ನು ಬಾಗಲಕೋಟೆಗೆ ತೆರಳ ಭೇಟಿಯಾಗಿ ನಿವೇದಿಸಿಕೊಂಡದ್ದು, ತನ್ನ ಮೇಣೆಯನ್ನು ಕಳಸಿ ದಾಸರನ್ನು ಗಜೇಂದ್ರಗಡಕ್ಕೆ ಕರಿಸಿಕೊಂಡಿದ್ದು, ದಾಸರ ಹಸ್ತದಿಂದ ಪ್ರಾಣಪ್ರತಿಷ್ಠೆ ಮಾಡಿಸಿದ್ದು ದಾಖಲೆಗಳಲ್ಲಿದೆ. ದಾಸರು ಈ ಕಾರ್ಯಕ್ಕೆ ಮೇಣೆಯಲ್ಲಿ ಬಂದಿಳದ ಸನ್ನಿವೇಶದ ತೈಲಚಿತ್ರವೊಂದು ಲಭ್ಯವಾಗಿದೆ. ಕನ್ನಡ ಸಂತ ಪರಸನ್ನ ಎಂಕೋಬಾ........ ಅಂತ ಮರಾಠಿಯಲ್ಲಿ ಈ ಚಿತ್ರದ ಕೆಳಗೆ ಬರೆಯಲಾಗಿದೆ. ಈ ಘಟನೆ ಪ್ರಸನ್ನ ವೆಂಕಟದಾಸರು ಎಷ್ಟು ಪ್ರಭಾವಶಾಲಿಯಾಗಿದ್ದರು ಎಂದು ತೋರಿಸುವ ಕುರುಹಾಗಿದೆ.

-3-

ಮುಂದೆ ಪೇಶ್ವೆಗಳ ಸಾಮಂತರು, ಮಾಂಡಲೀಕರು, ಪ್ರಸನ್ನ ವೆಂಕಟದಾಸರನ್ನು ಗೌರವಿಸಿದ್ದೂ, ದಾನ, ಧರ್ಮಗಳನ್ನು ನೀಡಿದ್ದು ಈ ಶಾಸನಗಳು ಅವರ ಜೀವನ ಚರಿತ್ರೆಯಲ್ಲಿ ದಾಖಲಾಗಿವೆ.

ಇದೇ ರೀತಿ ತಿರುವನಂತಪುರದ ಅನಂತಪದ್ಮನಾಭ ದೇವಾಲಯದ ಪುನರ್ ನಿರ್ಮಾಣವಾದದ್ದು. ಕ್ರಿ.ಶ.1725 ರಲ್ಲಿ ತ್ರಾವಣಕೋರದ ದೊರೆಯಾದ ಮಾರ್ತಾಂಡ ವರ್ಮನೆಂಬುವವನು ಉಡುಪಿ ಶ್ರೀಕೃಷ್ಣನ ಸನ್ನಿಧಿಯಲ್ಲಿ ಪ್ರಸನ್ನ ವೆಂಕಟದಾಸರನ್ನು ಕಂಡದ್ದು ಮುಂದೆ ಇದೇ ಪರಿಚಯದ ಕುರುಹಾಗಿ ಕ್ರಿ.ಶ.1737 ರಲ್ಲಿ ಅನಂತ ಪದ್ಮನಾಭ ದೇವಾಲಯದ ಪುನರ್ ನಿರ್ಮಾಣ ಕಾರ್ಯ ಮುಕ್ತಾಯಗೊಂಡು, ಅದೇ ಮಾರ್ತಾಂಡವರ್ಮನು ಪ್ರಸನ್ನ ವೆಂಕಟದಾಸರನ್ನು ಕರೆಸಿಕೊಂಡಿದ್ದು ನನಗೆ ಪಂಜಮಾರಿನ ರಾಜಗುರು ಐತಾಳ ಎಂಬುವವರಲ್ಲಿ ದೊರೆತ ಮಲೆಯಾಳಯಲ್ಲಿರುವ ಒಂದು ದಾಖಲೆಯಿಂದ ತಿಳದುಬರುತ್ತದೆ. ಈ ಸಮಯಕ್ಕೆ ದಾಸರು ಅನಂತ ಪದ್ಮನಾಭನ ಮೇಲೆ ರಚಿಸಿರಬಹುದಾದ ಒಂದು ಅತ್ಯಮೂಲ್ಯ ಕೃತಿಕೂಡ ದೊರಕ್ಕಿದ್ದು ಅದರಲ್ಲಿ "ಏನು ಕಾರಣವಿಲ್ಲಿ ಮಲಗಿರುವಿ ಹರಿ" ಎಂದು ಪ್ರಾರಂಭವಾಗುವ ಈ ಕೃತಿಯಲ್ಲಿ "ಕನಕೋಪೇತ" ಎಂಬ ಶಬ್ದ ಪ್ರಯೋಗದಿಂದ ತಿರುವನಂತಪುರ ಅನಂತಪದ್ಮನಾಭನ ಸಂಪತ್ತಿನ ವರ್ಣನೆ ಮತ್ತು ದಾಖಲೆ ಕೂಡ ಒದಗಿಸಿದ್ದಾರೆ. ಅದರಂತೆ ಈಗಿನ "ಗುರುವಾಯೂರು" ಕ್ಷೇತ್ರ ವರ್ಣನೆಯ ಇನ್ನೊಂದು ಕೃತಿ ದೊರಕಿದ್ದು ಮೊದಲು ಕುರುವಾಯೂರು" ಎಂದು ಕರೆಯುತ್ತಿದ್ದುದ್ದು, "ಕುರೈವ್" ಎಂದರೆ ಸಮುದ್ರ ತೀರದ ಊರು" ಎಂದು ತುಳು ಮತ್ತು ಮಲೆಯಾಳಯಲ್ಲಿ ಅರ್ಥ ಬರುತ್ತದೆ ಎಂಬುದು ಅಧ್ಯಯನದಿಂದ ತಿಳದು ಬರುವುದಲ್ಲದೇ 16ನೇ ಶತಮಾನದ ವರೆಗೆ ಕುರೈವ್ ಎಂದು ಕರೆಸಿಕೊಳ್ಳುತ್ತಿದ್ದ ಈಗಿನ "ಗುರುವಾಯೂರು" ದಾಸರ ಕಾಲದಲ್ಲಿಯೇ "ಕುರುವಾಯೂರು" ಎಂದಾಯಿತು ಎಂದು ದಾಸರು ಪ್ರಯೋಗಿಸಿದ ಶಬ್ಧಗಳಂದ ಮತ್ತು ಗುರುವಾಯೂರು ಕ್ಷೇತ್ರ ಇತಿಹಾಸದಿಂದ ತಿಳದುಬರುವುದು.

ಅದರಂತೆ ಸೀಮಾಂದ್ರ (ಆಂಧ್ರಪ್ರದೇಶದ) ಖಮ್ಮಂ ಜಿಲ್ಲೆಯಲ್ಲಿರುವ ಭದ್ರಾಚಲ ಶ್ರೀರಾಮದೇವಾಲಯವನ್ನು ಭಧ್ರಾಚಲ ರಾಮದಾಸರು ನಿರ್ಮಿಸಿದಾಗ ಉದ್ಘಾಟನೆಯ ಸಮಯಕ್ಕೆ ಕ್ರಿ.ಶ.1725 ರಲ್ಲಿ ಭದ್ರಾಚಲ ರಾಮದಾಸರು ಪ್ರಸನ್ನ ವೆಂಕಟದಾಸರನ್ನು ಕರೆಸಿಕೊಂಡುದಕ್ಕೆ ದಾಖಲೆ ದೊರೆತಿದೆ. ಮುಂಚೆ ಅಧಿಕಾರಿಯಾಗಿದ್ದ ಕೆಂಚರ್ಲ ಗೋಪಣ್ಣ ತಿರುಪತಿಗೆ ಮೇಲಿಂದ ಮೇಲೆ ಬರುತ್ತಿದ್ದುದು, ಬೆಟ್ಟದ ಮೇಲೆ ಆಗಾಗ ಪ್ರಸನ್ನ ವೆಂಕಟದಾಸರನ್ನು ಕಂಡು ಮೆಚ್ಚಿಕೊಂಡಿದ್ದು, ಪ್ರಭಾವಿತನಾಗಿ ವೈರಾಗ್ಯ ತಳೆದುದ್ದು, ರಾಮಭಕ್ತನಾಗಿದ್ದ ಈತ ಪ್ರಸನ್ನ ವೆಂಕಟದಾಸರ ವ್ಯಕ್ತಿತ್ವಕ್ಕೆ ಮಾರು ಹೋಗಿ ಭದ್ರಾಚಲ ರಾಮದಾಸರಾಗಿದ್ದು ಈಗಿನ ಶ್ರೀಕಾಕುಳಂ ಮತ್ತು ರಾಜಮಂದ್ರಿಯಲ್ಲಿರುವ ಭದ್ರಾಚಲ ರಾಮದಾಸರ ಕೆಲವು ಶಿಷ್ಯರ ಮನೆಯಲ್ಲಿ ಹೇರಳವಾಗಿ ಲಭ್ಯವಿರುವ ತೆಲುಗು ಕೃತಿಗಳಲ್ಲಿ ಕಾಣಸಿಗುತ್ತದೆ. ಪ್ರಸನ್ನ ವೆಂಕಟದಾಸರೂ ಕೂಡ

ಪುರಂದರದಾಸರನ್ನು ತಮ್ಮ ಆದರ್ಶವಾಗಿ ಮಾಡಿಕೊಂಡವರು. ಗೋದಾವರಿ ನದಿಗುಂಟ ಅನೇಕ ಬಾರಿ ಸಂಚರಿಸಿರಬಹುದಾದ ಐತಿಹ್ಯವಿದೆ. ಪುರಂದರದಾಸರ ಇನ್ನೂ ಪ್ರಕಟಣೆ ಕಾಣದ ಕೆಲವು ಕೃತಿಗಳು ಪ್ರಸನ್ನ ವೆಂಕಟದಾಸರ ಹಸ್ತಾಕ್ಷರದಲ್ಲಿ ನನಗೆ ದೊರಕಿರುವದೇ ಇದಕ್ಕೆ ಸಾಕ್ಷಿ. ಪುರಂದರದಾಸರು ವ್ಯಾಸರಾಯರ ಕಾಲಾ ನಂತರ (ಕ್ರಿ.ಶ.1539) ಹೆಚ್ಚಾಗಿ ಹಂಪಿಯಲ್ಲಿರದೇ ದೇಶ ಸಂಚಾರ ಕೈಗೊಂಡದ್ದು ಮುಂದೆ ಅವರ ಕಾಲಾನಂತರ (ಕ್ರಿ.ಶ.1564) ಅವರ ಮೊಮ್ಮಗ ನಡೆನೂರು ನಾರಾಯಣದಾಸರು ಮತ್ತು ಅವರ ಶಿಷ್ಯ ಪರಂಪರೆ ಗೋದಾವರಿ ದಂಟೆಗುಂಟ ವಾಸವಾಗಿದ್ದು ನನಗೆ

ದೊರೆತ ದಾಖಲೆಗೂ ಪ್ರಸನ್ನ ವೆಂಕಟದಾಸರ ಹಸ್ತಾಕ್ಷರದ ಪುರಂದರದಾಸರ ಕೃತಿಗಳಿಗೂ ಸಾಮ್ಯತೆ ಇರುವುದರಿಂದ ಪ್ರಸನ್ನ ವೆಂಕಟದಾಸರೂ ಕೂಡ ಪುರಂದರದಾಸರ ಕೃತಿಗಳನ್ನು ಪ್ರಚಾರಕ್ಕೆ ತಂದ ಮಹನೀಯರೆಂದೇ ಹೇಳಬೇಕು. ನನಗೆ ಆಲೂರು ವೆಂಕಟರಾಯರ ಶಿಷ್ಯರೊಬ್ಬರಿಂದ ದೊರೆತ ಮಾಹಿತಿ



ಆಧರಿಸಿ ಹೇಳುವುದಾದರೆ ಪುರಂದರದಾಸರ ಬದುಕು, ಸಾಧನೆ, ಜೀವನ, ಕೃತಿ ರಚನೆ ಕುರಿತು ನೈಜ ಚಿತ್ರಣ ನೀಡಿದವರು ಪ್ರಸನ್ನ ವೆಂಕಟದಾಸರೆ ಪ್ರಮುಖರು. ಪುರಂದರದಾಸರ ಕುರಿತು ರಚಿಸಿದ ಅವರ ಒಂದು ಕೃತಿಯಲ್ಲಿ ... ಗೀತ, ಠಾಯಿ, ಸುಳಾದಿ, ಉಗಾಭೋಗ.... ಎಂಬ ಆರು ಪ್ರಕಾರದ ಕೃತಿ ವಿಭಾಗವನ್ನು ಪುರಂದರದಾಸರು ರಚಿಸಿದ್ದರು ಎಂದು ಹೇಳಿದವರಲ್ಲಿ ಪ್ರಸನ್ನ ವೆಂಕಟದಾಸರು ಮೊದಲಿಗರಾಗುತ್ತಾರೆ. ಅಹೋಬಲ ಕ್ಷೇತ್ರವನ್ನು ವರ್ಣಿಸುವ ಒಂದು ಕೃತಿಯಲ್ಲಿ ಪಾರ್ವತಿಪುರ ಎಂಬ ಶಬ್ಧ ಪ್ರಯೋಗ ನೋಡಿದರೆ ಪ್ರಸನ್ನ ವೆಂಕಟದಾಸರಿಗೆ ಭೌಗೋಳಿಕ ಜ್ಞಾನ ಅಪಾರವಾಗಿತ್ತೆಂಬುದು ಸ್ಪಷ್ಟವಾಗುತ್ತದೆ. ಅಹೋಬಲ ಕ್ಷೇತ್ರ ಇತಿಹಾಸ ವರ್ಣನೆ ಅತೀ ವಿಶಿಷ್ಠವಾದದ್ದು. ಈ ವಿಷಯವನ್ನು ಪುರಂದರದಾಸರ ನಂತರ ಆಸಕ್ತರಿಗೆ ನೀಡಿದ್ದೇ ಪ್ರಸನ್ನ ವೆಂಕಟದಾಸರು.

ಕ್ರಿ.ಶ.1805 ರಲ್ಲಿ ಜಗನ್ನಾಥದಾಸರನ್ನು ಕಂಡ ಇನ್ನೊಬ್ಬ ವ್ಯಕ್ತಿ ಕರ್ನಲ್ ಮೆಕೆಂಜಿ. ಸಾಣೇಗಿರಿಯೆಂಬಲ್ಲಿ ಪ್ರಾಣದೇವರನ್ನು ಪ್ರಸನ್ನ ವೆಂಕಟದಾಸರು ಪ್ರತೀಷ್ಠಿಸಿ ಸೇವೆಗೈದುದನ್ನು ಜಗನ್ನಾಥದಾಸರು ಕ್ಷೇತ್ರ ಪುರಾಣದಡಿ ವಿವರಿಸಿ ಕೈಫಿಯತ್‌ನ್ನು ಬರೆಸಿ ಕೊಟ್ಟದ್ದು ನನಗೆ ದೊರಕಿದೆ. ಜಗನ್ನಾಥ ದಾಸರ ಕೃತಿಯಾದ...... ಸಾಣೆಗಿರಿಯ ಪ್ರಾಣನಾಥಾದಲ್ಲಿ ಕಾಖಂಡಿ ಪ್ರಸನ್ವೆಂಕಟಾಚಾರ್ಯರ ಅಖಂಡ ಸೇವೆಗೆ... ಅಂತಾ ಉಲ್ಲೇಖಿಸಿದ್ದನ್ನು ಅವರ ಕಿರಿಯ ಶಿಷ್ಯ ತಾತೇದಾಸರು ದಾಖಲಿಸಿದ್ದಾರೆ. ಅಂದರೆ ಪ್ರಸನ್ನ ವೆಂಕಟದಾಸರು ಹಲವು ಕಡೆ ಹನುಮಂತದೇವರನ್ನು ಪ್ರತಿಷ್ಠಾಪಿಸುವ ಕೈಂಕರ್ಯ ತೊಟ್ಟಿದ್ದರೆಂದು ತಿಳಿದು ಬರುತ್ತದೆ.

ಪ್ರಸನ್ನ ವೆಂಕಟರಮಣಸ್ವಾಮಿ ದೇವಸ್ಥಾನದಲ್ಲಿ ಏಕಾದಶಿ ರಾತ್ರಿ ಶ್ರೀನಿವಾಸನು ಪ್ರಸನ್ನನಾಗಿದ್ದು. ಅಂಕಿತ ನೀಡಿದ್ಯಾ ಎಂದು ಸ್ವತಃ ಪ್ರಸನ್ನ ವೆಂಕಟದಾಸರೇ ಹೇಳಿಕೊಂಡಿದ್ದು ತಮ್ಮ ಕೃತಿಗಳಲ್ಲಿ ಮಾಧ್ವ ಪರಂಪರೆ ಮತ್ತು ಹರಿದಾಸ ಪರಂಪರೆಗೆ ಸಂಬಂಧಿಸಿದಂತೆ ಅನೇಕ ಮಹತ್ವ ಪೂರ್ಣ ದಾಖಲೆ ನೀಡಿದ್ದಾರೆ. ಅವರ ಒಂದು ಕೃತಿ... ಪ್ರಸನ್ವೆಂಕಟಾಬ್ರಹ್ಮಮುಕುಟಾ ... ಎಂದು ಹೇಳುವ ಮೂಲಕ ನರಹರಿತೀರ್ಥರಿಂದ ಕನ್ನಡದಲ್ಲಿ ಕೃತಿ ರಚನೆಗೆ ಮುಂದಾಯಿತೆಂಬ ಸುಳಿವು ನೀಡಿದ್ದಾರೆ. ಇನ್ನು ಬಾರೋ ವೆಂಕಟರಮಣ ಎಂಬೊಂದು ಕೃತಿಯಲ್ಲಿ ... ವ್ಯಾಸಕರಾರ್ಚಿತ ವಾಸುದೇವ ಬಾ... ಎಂದು ಹೇಳಿ ವ್ಯಾಸರಾಯರು ತಿರುಮಲ ಬೆಟ್ಟದ ಮೇಲಿದ್ದು 12 ವರ್ಷಗಳ ಕಾಲ ಪೂಜೆ ನಡೆಸಿದ್ದರೆಂಬುದಕ್ಕೆ ದಾಖಲೆ ನೀಡಿದ್ದಾರೆ.

ಇನ್ನೂ ನನಗೆ ದೊರೆತ ಪ್ರಸನ್ನ ವೆಂಕಟದಾಸರ ಅಪ್ರಕಟಿತ ಕೃತಿಗಳಲ್ಲಿ ಬಹು ವಿಶಿಷ್ಟವಾದುದೆಂದರೆ ಕಾಲಜ್ಞಾನ ಕೃತಿ. 40 ನುಡಿಗಳಲ್ಲಿ ಶ್ರೀಪ್ರಸನ್ನ ವೆಂಕಟದಾಸರು 250 ವರ್ಷ ಹಿಂದೆಯೇ ಈ ಜಗತ್ತಿನ

ಜೀವನ ಮುಂದಿನ ದಿನಗಳಲ್ಲಿ ಯಾವ ರೀತಿಯದಾಗಿರುತ್ತದೆ ಎಂಬ ಭವಿಷ್ಯ ಬಿಚ್ಚಿಟ್ಟಿದ್ದಾರೆ. ಯಾವುದೇ ದಾಸರಾಗಲೀ, ವಚನಕಾರರಾಗಲಿ ಸಾಮಾಜಿಕ ಜೀವನವನ್ನು ವರ್ಣಿಸಲು ತಮ್ಮ ಜ್ಞಾನವನ್ನು ಮುಡುಪಿಟ್ಟಿದ್ದಿಲ್ಲಾ. ಆದರೆ ನಾವು ದಾಸವಾಜ್ಮಯವನ್ನು ಇಡೀಯಾಗಿ ಅಧ್ಯಯನ ಮಾಡುತ್ತ ಕೆಲವು ವಿಂಗಡನೆ ಮಾಡ ಹೊರಟರೆ ದಾಸರು ಸಮಾಜಮುಖಿ ಸಾಹಿತ್ಯವನ್ನು ನೀಡಿದ್ದು ಸಮಾಜದಲ್ಲಿಯ ರೀತಿ ನೀತಿಗಳನ್ನು ಎತ್ತಿ ತೋರಿಸಿದ್ದು. ಉಪದೇಶ ಮಾಡಿದ್ದು ನೋಡಬಹುದಾಗಿದೆ.

-5-

ಅದೇ ರೀತಿಯಾಗಿ ಪ್ರಸನ್ನ ವೆಂಕಟದಾಸರ ಕೃತಿಗಳಲ್ಲಿಯೂ ನಾವು ಅವರಿಗಿದ್ದ ಸಾಮಾಜಿಕ ಕಳಕಳ ಕಂಡುಕೊಳ್ಳಬಹುದಾಗಿದೆ. ಪ್ರಸ್ತುತ ಪ್ರಕಟವಾದ ಪ್ರಸನ್ನ ವೆಂಕಟದಾಸರ ಕೃತಿಗಳಲ್ಲಿ ಅಲ್ಲಲ್ಲಿ ವ್ಯಕ್ತವಾದ ವಿಚಾರಗಳು ಒಂದಾಗಿ ಹೊರಬಂದ ಈ ಕಾಲಜ್ಞಾನ ಕೃತಿ ನಮಗೆ ಭವಿಷ್ಯವಾಣಿ ಎನಿಸಿದರೂ ಎಚ್ಚರಿಕೆಯೂ ಇದರಲ್ಲಿ ಸೇರಿದೆ ಎಂದರೆ ತಪ್ಪಲ್ಲ. " ಗಿರಿಶಿಖರ ತಳವೊಡೆದು ನೀರಾಟವಾಡುವದು" ಎಂಬ ದಾಸರ ಭವಿಷ್ಯವಾಣಿ ಇತ್ತೀಚಿಗೆ ಉತ್ತರಾಖಂಡದಲ್ಲಿ ಬದರಿ, ಕೇದಾರಗಳಲ್ಲಿ ಸಂಭವಿಸಿದ ಜಲಪ್ರವಾಹ ನೆನಪಿಗೆ ತರುತ್ತದೆ. "ದ್ವಿಜರೆಲ್ಲ ನಿಜ ತೊರೆದು ವೃಜದಲ್ಲಿ ಬಳಲುವರು" ಎಂದು ದಾಸರು ಬ್ರಾಹ್ಮಣರು ಬ್ರಾಹಣರಾಗಿ ಉಳಿಯುವದಿಲ್ಲ ವೆಂದು ಹೇಳಿದ್ದಾರೆ. ತರತರದ ವ್ಯಾಧಿ ರೋಗರುಜಿನಾದಿ ಪರಿಹಾರ ಕಾಣದೆ ತಿರುಗ್ಯಾರೋ ಜಗದಿ॥" ಎಂಬ ದಾಸರ ಭವಿಷ್ಯ ಇಂದು ನಮ್ಮೆಲ್ಲರಿಗೂ ಏಡ್ಸ್, ಎಬೋಲಾ ದಂತಹ ರೋಗಗಳು ಗಮನಕ್ಕೆ ಬರುವಂತಾಗಿದೆ. ಕೊಪ್ಪರಿಗೆ ಸಂಪತ್ತು ಕೂಡಿಟ್ಟು ಛಿಖನಾಶಿ ಛಪ್ಪನ್ನ ದೇಶಕ್ಕೆ ಅಪರೂಪದ ವ್ಯಕ್ತಿ॥ ಎಂದು ಹೇಳಿ ದಾಸರು ಇಂದು ಪತ್ರಿಕೆಗಳಲ್ಲಿ ನಾವು ಓದುತ್ತಿರುವ ವಿಶ್ವದ ನಂರಾ ಶ್ರೀಮಂತರು ಮತ್ತು ಕೆಲವೇ ವರ್ಷಗಳ ಹಿಂದೆ ಬಡತನರೇಖೆಗಿಂತ ಕೆಳಗಿದ್ದವರು ಎಂಬುದನ್ನು ನೆನಪಿಗೆ ತರುತ್ತದೆ. ಅದರಂತೆ ಜಾಗತಿಕ ತಾಪಮಾನ, ಜನಸಂಖ್ಯೆಯ ಹೆಚ್ಚಳ, ಅರಣ್ಯ ನಾಶ, ಪರಿಸರ ಹಾನಿ, ದುರ್ಮಾರ್ಗದ ವ್ಯಾಪಾರ, ಮಠ, ಮಂತ್ರ ಶಕ್ತಿಗಳ ವ್ಯಾಪಾರ, ನಿಧಿ ಹುಡುಕಾಟ, ಜೂಜಾಟ, ತಾಪಮಾನ ಹೆಚ್ಚಳ, ದುರ್ವ್ಯಸನಿಗಳು, ಕಾಲಮಾನದಲ್ಲಿ ಬದಲಾವಣೆ, ಮುಂತಾದವುಗಳನ್ನು ಹೆಸರಿಸಿದ ದಾಸರು ಇಂದು ನಾವುಗಳು ದಿನ ನಿತ್ಯವೂ ಅನುಭವಿಸುತ್ತಿರುವ ಘಟನೆಗಳನ್ನು ಮೆಲುಕು ಹಾಕಿದ್ದಾರೆ. "ಅಣ್ಣತಂಗಿಯರು ಮದುವೆಯಾಗುವರು, ತಂದೆಯಿಂದಲೇ ಮಗಳ ಭೋಗ, ಪೀಠ ತೊರೆದು ಸನ್ಯಾಸಿ ಸಂಸಾರಿಯಾಗುವುದು, ಮಠ, ಮಂದಿರಗಳು ವ್ಯಾಪಾರ ಕೇಂದ್ರಗಳಾಗುವದು, ಜ್ಯೋತಿಷ್ಯದ ನೆಪದಲ್ಲಿ ಜನರನ್ನು ಸುಲಿಗೆಮಾಡುವುದು, ಮೋಜಿನ ದೇವರುಗಳ ಪೂಜೆ ಮುಂತಾದವುಗಳನ್ನು ಹೇಳಿದ ದಾಸರ ಮಾತು ಇಂದು ನಮ್ಮ ಅನುಭವಕ್ಕೆ ಬಂದುದಾಗಿದೆ, ಇದೆಲ್ಲಕ್ಕಿಂತ ಮುಖ್ಯವಾಗಿ ದಾಸರು ಈ ಕಾಲಜ್ಞಾನ ಕೃತಿಯಲ್ಲಿ ತಿಮ್ಮಪ್ಪನ ಗುಡಿಯಲ್ಲಿ ವಿಚಿತ್ರ ರೀತಿ ಪ್ರಾಣಿ ಪಕ್ಷಿಗಳು ಕಾಣಬರುವವು ಮತ್ತು ತಿಮ್ಮಪ್ಪನ ಗರ್ಭಗುಡಿಯ ಬಾಗಿಲು ಮುಚ್ಚಿಕೊಳ್ಳುವುದು ಎಂದು ನುಡಿದಿದ್ದಾರೆ. ಕೊರವಂಜಿ ನುಡಿದ ಮುಂಜಗದ ನಾಡಿ। ಪರಸನ್ನ ವೆಂಕಟದಾಸರ ನೋಡಿ॥ ಎಂದು ತಮ್ಮನ್ನೇ ಪಾತ್ರದಲ್ಲಿ ಎಳೆದುಕೊಳ್ಳುವ ದಾಸರು ಈ ಕೃತಿ ರಚನೆಯ ಸಮಯಕ್ಕೆ ಸಾಮಾಜಿಕ, ರಾಜಕೀಯ ವ್ಯವಸ್ಥೆ, ಹದಗೆಡುವತ್ತ್ ಸಾಗಿರಬೇಕು. ಆ ನೋವಿನ ನೋಟ ದಾಸರ ಬಾಯಿಯಿಂದ ಭವಿಷ್ಯ ನುಡಿಸಿರಬೇಕು. ಧಡಿಯಂಚು ಜರತಾರಿ ಸೀರಿ ಮಾಯಾಗಿ। ಉಡತಾರ ನಾರೇರು ತರತರದ ಮಲಕಂಗಿ॥ ಕುಡಿದ ಕೋಡಗದ್ಹಿಂಡು ಬೀಡಾಡಿ ದನ ಹಂದಿ। ನೋಡವಳ ಅನುವಂಗ

ನಾಡನ್ನಾಳುವ ಮಂದಿ॥ ಅದರಂತೆ " ಹಗಲ ಹಾದರ ಮಾಡಿ ಒಪ್ಪಿಟ್ಟುಕೊಂಬರು। ತಗಲ ಬಾಜಿ ಮಂದಿ ಭರದಿಂದ ಮೆರೆದಾರು॥ ಭೋಗ ಜೀವನವೇ ಭಾಗ್ಯವೆನ್ನುತ ಜನ। ಸಾಗಿ ಸೆರೆವಾಸದಿ ಮರುಗಿ ಸಾಯುವರು॥ ಎಂದು ತಳಮಳಸಿರುವರು. ಮಾಯ ಮಾಟ ಮಂತ್ರ ಪುರವಂತರಾದಿ। ಬಾಯ್ ಬಡುಕ ಜನಕಿದೆ ವ್ಯಾಪಾರ ಜಗದಿ॥ ಎಂದ ದಾಸರು ಕುಂತಲ್ಲೆ ಕುಂತಳ ದೇಶವ ಸುತ್ತುವರು। ಎಂದು ಆಧುನಿಕ ತಂತ್ರಜ್ಞಾನ ಮಹಿಮೆಯನ್ನು ಆಗಲೇ ಸಾರಿದ್ದಾರೆ. ವೇದೊಪನಿಷತ್ತು ವಾದಕ್ಕೆ ಬಳಸುವರು। ಮೋದ ಮೋಜಿನ ವಸ್ತು ಆಗುವರು ದೇವರು॥ ಆದ್ಯರ ಬೋದೆ ನಿಂದನೆಗಳೊಗಾಗುವದು। ವೈದಿಕ ಮತ ತನ್ನ ಹಾದಿ ತಪ್ಪುವದು॥ ಎಂದು ಬೇಸತ್ತು ನುಡಿದ ದಾಸರು... ಮಾತಲ್ಲೇ ಮಾತಂಗ ಪರ್ವತ ತಂದಿಡುವ। ಚತುರರನೇಕರ ಚದುರಂಗದಾಟವು॥ ಎಂದು ಇಂದಿನ ದಿನಗಳ ಚಿಂತನೆ ಮಾಡಿದ್ದಾರೆ.

-6-

ತೀರ್ಥಕ್ಷೇತ್ರಾಟನೆ, ಶಾಸ್ತ್ರಾಧ್ಯಯನ ಮತ್ತು ಅನುಷ್ಠಾನಗಳು ಹರಿದಾಸ ವೃತ್ತಿಯ ಪ್ರಮುಖ ಭಾಗಗಳು. ಪ್ರಸನ್ನ ವೆಂಕಟದಾಸರೂ ಶ್ರದ್ಧೆಯಿಂದ ಅನುಸರಿಸಿದ ವೃತ್ತಗಳಿವು. ಮುಖ್ಯವಾಗಿ ವಿಷ್ಣು ಕ್ಷೇತ್ರಗಳ ದರ್ಶನ, ಅಲ್ಲಿನ ಮಹಿಮೆಗಳ ವರ್ಣನೆಯನ್ನು ಪ್ರಸನ್ನ ವೆಂಕಟದಾಸರ ಕೃತಿಗಳಲ್ಲಿ ನಾವು ವಿಪುಲವಾಗಿ ಕಾಣಬಹುದಾಗಿದೆ. ಈಗ ನಾನು ಸಂಗ್ರಹಿಸಿದ ಹಲವರ ಹಸ್ತಪ್ರತಿಗಳಲ್ಲಿ ಪ್ರಸನ್ನ ವೆಂಕಟದಾಸರೂ, ವ್ಯಾಸರಾಯರಂತೆ ಕೆಲವು ಸ್ಥಳಗಳಲ್ಲಿ ಹನುಮಂತದೇವರನ್ನು ಸ್ಥಾಪಿಸಿದ ಉಲ್ಲೇಖ ದೊರೆಯುತ್ತದೆ. ಕೇರಳದ ಶ್ರೀಪದ್ಮನಾಭ ದೇವಸ್ಥಾನದ ಪುನರ್ರನಿರ್ಮಾಣವಾಗಿ ಅಲ್ಲಿಯ ದೊರೆ ಮಾರ್ತಾಂಡ ವರ್ಮನೆಂಬುವನು ಪ್ರಸನ್ನವೆಂಕಟದಾಸರಿಂದ ಪ್ರಭಾವಿತನಾಗಿ ತಿರುವನಂತಪುರಕ್ಕೆ ದಾಸರನ್ನು ಕರೆಸಿಕೊಂಡಿರುವ ಕುರಿತ ಟಿಪ್ಪಣಿ ಮತ್ತು ಕೃತಿ ಮಲೆಯಾಳ ಭಾಷೆಯಲ್ಲಿರುವದು ನನಗೆ ದೊರಕಿದೆ. ಜೊತೆಗೆ ಪ್ರಸ್ತುತ ಹುಗ್ಲಿಯಲ್ಲಿರುವ ಓರಿಸ್ಸಾ ಮೂಲದ ನನ್ನ ಸ್ನೇಹಿತ ಶ್ರೀಗಣೇಶ ಎಂಬುವವರ ಬಳಿ ಅರೇಬಿಕ್ ಭಾಷೆಯಲ್ಲಿ ಬರೆದಿಡಲಾದ ಪ್ರಸನ್ನ ವೆಂಕಟದಾಸರ ಅಂಕಿತವಿರುವ ವಿಷ್ಣುಸ್ತುತಿಯೊಂದು ನನ್ನ ಸಂಗ್ರಹಕ್ಕೆ ಬಂದಿದೆ. ಕಾರ್ಬನ್ ಡೇಟಿಂಗ ಪ್ರಕಾರ ಇನ್ನೂರು ವರ್ಷಗಳ ಹಿಂದಿನ ಹಸ್ತ ಪ್ರತಿಯೆಂದು ತಿಳಿದು ಬರುವ ಇದು ಪ್ರಸನ್ನ ವೆಂಕಟದಾಸರ ಜೀವಿತಾವಧಿಯಲ್ಲಿಯೇ ಬರೆದುದಾಗಿದೆ. ಅದರಂತೆ ನನಗೆ ಪರಿಚಯವಿರುವ ಈಗ ಡಿಲ್ಲಿಯಲ್ಲಿ ನೆಲೆಸಿರುವ ವಿಶ್ರಾಂತ ಐಎಎಸ್ ಅಧಿಕಾರಿಯೊಬ್ಬರು ಲಂಡನ್ನಿನ ಲೈಬ್ರರಿವೊಂದರಿಂದ ತರಿಸಿಕೊಟ್ಟ ಹರಿದಾಸ ಸಾಹಿತ್ಯ ರಾಶಿಯಲ್ಲಿ ಪ್ರಸನ್ನವೆಂಕಟದಾಸರವು ಎನ್ನುವ ಎರಡು ಕೃತಿಗಳು ಉರ್ದುವಿನಲ್ಲಿ ಬರೆದ ಹಸ್ತಪ್ರತಿ ಕಟ್ಟಿನಲ್ಲಿವೆ. ಈ ಹಸ್ತ ಪ್ರತಿಗಳಲ್ಲಿ ಬರೆದ ಚಿಕ್ಕ ಟಿಪ್ಪಣಿಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಪ್ರಸನ್ನ ವೆಂಕಟದಾಸರು ಬಹು ಮೇರು ವ್ಯಕ್ತಿತ್ವದವರು. ನಿರಂತರ ತಮ್ಮ ಸಮಕಾಲಿನ ಇತರ ಮತದ ಜ್ಞಾನಿಗಳೊಡನೆ ಸಂಪರ್ಕ ಹೊಂದಿದವರು, ಅನೇಕ ಜನ ಪಾಳೇಗಾರರು, ರಾಜ ಮಹಾರಾಜರಿಂದ ಮನ್ನಣೆ ಪಡೆದವರಾಗಿದ್ದರು ಎಂಬುದಾಗಿ ತಿಳಿಯಬಹುದಾಗಿದೆ. ಭಾಗವತ ಕನ್ನಡೀಕರಣಗೊಳಿಸಿದ್ದರ ಜೊತೆಗೆ ಕೆಲವು ಪ್ರಮುಖ ಸಂಸ್ಕೃತ ಮಂತ್ರಗಳನ್ನು ಕನ್ನಡದಲ್ಲಿ ಕೃತಿಯಾಗಿಸಿದ ಕೀರ್ತಿ ಪ್ರಸನ್ನ ವೆಂಕಟದಾಸರಿಗೆ ಸಲ್ಲುತ್ತದೆ. ಕನ್ನಡ ವ್ಯಾಕರಣ ಮತ್ತು ಭಾಷಾ ಕ್ಷೇತ್ರಗಳಲ್ಲಿ ಹೆಸರು ಮಾಡಿರುವ ಹರಿಹರನ ರಗಳೆಯನ್ನು ಹೊಲುವ ಏಳು ಸಾಲಿನ ಮತ್ತು ಒಂಭತ್ತು ಸಾಲಿನ ಕೃತಿಗಳು ಕೆಲವು ಪ್ರಸನ್ನ ವೆಂಕಟರ ಅಂಕಿತದಲ್ಲಿವೆ. ಸ್ವತಃ ಪ್ರಸನ್ನ ವೆಂಕಟದಾಸರ ಹಸ್ತಕ್ಷರದಲ್ಲಿಯೇ ಶ್ರೀಪುರಂದರದಾಸರ ಕೆಲವು ಅಪ್ರಕಟಿತ ಕೃತಿಗಳೂ ಲಭ್ಯವಾಗಿವೆ. ಈ ಕೃತಿಗಳನ್ನು ದೀರ್ಘವಾಗಿ ಅಧ್ಯಯನ ಮಾಡಿದಾಗ ಪ್ರಸನ್ನ ವೆಂಕಟದಾಸರೂ, ವಿಜಯದಾಸರಂತೆ ಪುರಂದರದಾಸರ ಕೃತಿಗಳನ್ನು ಪ್ರಚಾರಕ್ಕೆ ತಂದವರಾಗುತ್ತಾರೆ. ಪ್ರಸನ್ನವೆಂಕಟದಾಸರ ಇನ್ನೂ ಕೆಲವು ಕೃತಿಗಳು ಜಗನ್ನಾಥದಾಸರ ಶಿಷ್ಯ ತಾತೇದಾಸರ ಹಸ್ತಕ್ಷರದಲ್ಲಿದ್ದು

ನವವೃಂಗಾವನಗಡ್ಡೆಯಲ್ಲಿರುವ ವೃಂದಾವನಗಳು ಮುಂತಾದ ವಿಷಯಗಳ ಮೇಲೆ ಬೆಳಕು ಚೆಲ್ಲುತ್ತವೆ. ಪ್ರಸನ್ನ ವೆಂಕಟದಾಸರು ಮಧ್ವಸಿದ್ಧಾಂತ ಮಾರ್ಗವಾದ ಅಭಿಮಾನಿ ದೇವತೆಗಳು ಮತ್ತು ಅವರವರ ಕಕ್ಷೆಗೆ ಸಂಬಂಧಿಸಿದ ಕೃತಿಯೊಂದನ್ನು ರಚಿಸಿದ್ದು ದಾಸರಿಗೆ ದ್ವೈತ ಸಿದ್ಧಾಂತದಲ್ಲಿದ್ದ ಆಳವಾದ ಜ್ಞಾನದ ದರ್ಶನ ಮಾಡಿಸುತ್ತದೆ. ವಿಜಯದಾಸರಂತೆ, ಪ್ರಸನ್ನ ವೆಂಕಟದಾಸರಿಗೂ ಶಿಷ್ಯವರ್ಗವಿದ್ದುದೂ ಕೂಡ ಗಮನಕ್ಕೆ ಬಂದಿದೆ. "ಶ್ರೀಶಯ್ಯವಿಟ್ಟಲ" ಎಂಬ ಅಂಕಿತ ಕೊಟ್ಟು ಅವರಿಗೆ ಹರಿದಾಸ ವೃತ್ತಿಗೆ ತಂದಿರುವದು ಒಂದು ಕೃತಿ ಲಭ್ಯವಾಗಿದೆ. ಈ ಶ್ರೀಶಯ್ಯ ವಿಠ್ಠಲರು ಪ್ರಸನ್ನ ವೆಂಕಟದಾಸರ ಮಗನೋ ಇಲ್ಲವೇ ಹೊರಗಿನವನೋ ಅಧ್ಯಯನ ನಡೆಯಬೇಕಿದೆ.

-7-

ಈ ರೀತಿ 17-18 ನೇ ಶತಮಾನದಲ್ಲಿ ಹರಿದಾಸ ಬಾನಂಗಳದಿ ತೇಜಃಪುಂಜ ತಾರೆಯಾಗಿ ಮೆರೆದ ಪ್ರಸನ್ನ ವೆಂಕಟದಾಸರು ತಾವು ಪಂಡಿತರಾದರೂ ಪಾಂಡಿತ್ಯ ಮೆರೆದವರಾಗಿರದೇ ಸರಳ, ನಿಯಮಬದ್ಧ, ಸಾತ್ವಿಕ ಜೀವನ ನಡೆಸಿ ಎಲ್ಲ ಜಾತಿ, ಮತ, ಪಂಥಗಳ ಜನರಿಗೆ ಬೇಕಾದವರಾಗಿ ಬಾಳಿದವರು. ಸಾವಿರಾರು ಅತ್ಯಮೂಲ್ಯ ಕೃತಿ ರಚಿಸಿದ್ದರೂ ದುರ್ದೈವದಿಂದ ನಮಗವು ದೊರಕಿಸಿಕೊಳ್ಳಲಾಗಲಿಲ್ಲ. ಶ್ರೀ ವಿಜಯದಾಸರಿಗಿದ್ದ ಶಿಷ್ಯರ ಗುಂಪು ಪ್ರಸನ್ನ ವೆಂಕಟದಾಸರಿಗಿರದಿದ್ದರೂ ಏಕ ಸಂಸ್ಥೆಯಾಗಿ ಅವರು ಕನ್ನಡ ಸಾರಸ್ವತಲೋಕಕ್ಕೆ ಮುಖ್ಯವಾಗಿ ಮಾಧ್ವವಾಙ್ಮಯಕ್ಕೆ ನೀಡಿದ ಕೊಡುಗೆ ಅಪಾರವಾದದ್ದು. ಗೋರೇಬಾಳ ಹನುಮಂತರಾಯರಂತಹ ಗಟ್ಟಿ ಮನಸ್ಸಿನ ವ್ಯಕ್ತಿ ಪ್ರಸನ್ನ ವೆಂಕಟದಾಸರ ಜೀವನ, ಕೃತಿ ಬೆಳಕಿಗೆ ತರುವ ಕಾಯಕಕ್ಕೆ ಇಲ್ಲಿ ಯಾರೂ ಮುಂದಾಗಿಲ್ಲ. ದಾಸರ ಮನೆತನದವರ ಕಿತ್ತಾಟದಲ್ಲಿ ಅನೇಕರು ಇವರ ಮನೆಯಲ್ಲಿದ್ದ ಗ್ರಂಥ ರಾಶಿಯನ್ನು ಹಂಚಿಕೊಂಡು ಹೋಗಿದ್ದಾರೆ. ಕಿತ್ತಾಟದ ಭರದಲ್ಲಿ ನೀರಿಗೆ ಸೇರಿದ್ದೂ ಉಂಟು. ಕೀರ್ತಿ, ಗೌರವ, ಸಂಪಾದನೆಯಲ್ಲಿ ಪ್ರಸನ್ನವೆಂಕಟದಾಸರ ವ್ಯಕ್ತಿತ್ವ ಕಡಿಮೆಯೇನಿಲ್ಲ ಎಂಬುದಕ್ಕೆ ಪೂರಕ ದಾಖಲೆಗಳಲ್ಲಿ ಒಳಗೊಂಡಿದೆಯಲ್ಲದೇ ನನಗೆ ದೊರೆತ ಅರೇಬಿಕ್, ಫಾರ್ಸಿ ಭಾಷೆಯಲ್ಲಿಯೂ ಪ್ರಸನ್ನ ವೆಂಕಟದಾಸರ ಉಲ್ಲೇಖ ಬಂದಿದೆ. ಹರಿದಾಸ ಸಾಹಿತ್ಯ ಮತ್ತು ಮಾಧ್ವವಾಙ್ಮಯದ ಹಾಸು ಇನ್ನೂ ಅನೇಕ ಪೂರಕ ಮತ್ತು ಸಮಕಾಲಿನ ದಾಖಲೆಗಳಲ್ಲಿ ಒಳಗೊಂಡಿದ್ದು ಹೆಕ್ಕಿ ತೆಗೆಯುವ ಕಾರ್ಯ ನಡೆಯಬೇಕು. ವಚನ ಸಾಹಿತ್ಯ ಹುಡುಕಾಡಿದ ಫ.ಗುಹಳಕಟ್ಟಯವರು ಒಬ್ಬರ ಮನೆಯಲ್ಲಿ ಒಂದೇ ವಚನ ಸಂಗ್ರಹವಿದೆಯೆಂದರೆ ನಸುಕಿನ ಜಾವ 5 ಗಂಟೆಗೆ ಅವರ ಮನೆ ಮುಂದೆ ಹೋಗಿ ಕೂಡುತ್ತಿದ್ದರಂತೆ. ಅವರು ಏಳುವವರೆಗೆ ಕಾಯ್ದು, ಅವರ ನಿದ್ರೆಗೆ ಭಂಗ ತಾರದಂತೆ ವಿನಂತಿಸಿಕೊಂಡು ಆ ಒಂದೇ ವಚನವನ್ನು ಸಂಗ್ರಹಿಸುತ್ತಿದ್ದರಂತೆ. ಇದು ನಿಜವಾದ ಕಳಕಳಿ. ಇಂತಹ ಕಾರ್ಯವನ್ನೇ ಗೋರೇಬಾಳ ಹಣಮಂತರಾಯ ರಾದಿಯಾಗಿ 12-15 ಜನ ಸಂಪನ್ನರು ಹರಿದಾಸ ಸಾಹಿತ್ಯ ಸಂಶೋದನೆ ವಿಷಯದಲ್ಲಿಯ ಕಳಕಳಿ ಮೆರೆದಿದ್ದಾರೆ. ಅಂಥದೇ ಪ್ರಯತ್ನ ಪುರಂದರ ದಾಸರ ವಿಷಯದಲ್ಲಿ ದಿ.ಎಸ್.ಕೆ ರಾಮಚಂದ್ರರಾಯರು ಯಶಸ್ವಿಯಾಗಿ ಮಾಡಿದ್ದಾರೆ. ಪ್ರಸನ್ನ ವೆಂಕಟದಾಸರ ವಿಷಯದಲ್ಲಿಯೂ ಕೂಡ ಸಮಗ್ರ ಅಧ್ಯಯನ, ಅವರ ಸಮಕಾಲಿನ ಇತಿಹಾಸ, ಹೊರಬಂದ ಗ್ರಂಥಗಳನ್ನು ತಿರುವಿ ಹಾಕಿ ನೈಜತೆಯನ್ನು ಕಂಡುಕೊಳ್ಳುವದು ಇಂದಿಗೆ ಅವಶ್ಯಕತೆಯಿದೆ. ಅಂತಹ ಕಳಕಳಿ ದಾಸರು ಯಾರಲ್ಲಿ ಹುಟ್ಟಿಸುತ್ತಾರೋ ಕಾದು ನೋಡಬೇಕು.